ಒದಗಿಸಿದ್ದು ಅದನ್ನು ಸಂಸ್ಥೆಗೆ ಬಿಡುಗಡೆ ಮಾಡಲಾಗಿರುತ್ತದೆ. ಅಲ್ಲದೆ ಸದರಿ ಸಂಸ್ಥೆಗೆ ಹೊಸ ಬಸ್‌ಗಳ ಖರೀದಿಗಾಗಿ ವಾಣಿಜ್ಯ ಬ್ಯಾಂಕ್ ಮತ್ತು ಹಣಕಾಸು ಸಂಸ್ಥೆಗಳಿಂದ ರೂ. 34.00 ಕೋಟಿ ಸಾಲ ಪಡೆಯುವುದಕ್ಕೆ 2007–08ರಲ್ಲಿ ಅನುಮತಿ ನೀಡಲಾಗಿರುತ್ತದೆ.

2008–09ನೇ ಸಾಲಿನಲ್ಲಿಯೂ ಆಯವ್ಯಯದಲ್ಲಿ ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ, ಗುಲ್ಬರ್ಗಾಕ್ಕೆ ವಿಶೇಷ ಅಭಿವೃದ್ಧಿ ಯೋಜನೆಯಡಿ ರೂ. 30.00 ಕೋಟಿ ಅನುದಾನವನ್ನು ಲೆಕ್ಕ ಶೀರ್ಷಿಕೆ 5055–00–190–4–00 ಇದರಡಿಯಲ್ಲಿ ಒದಗಿಸಿದೆ. ಅಲ್ಲದೆ ಈ ಸಂಸ್ಥೆಗೆ ಆಯವ್ಯಯದಲ್ಲಿ ಐ.ಇ.ಬಿ.ಆರ್.ನಡಿ (Internal Extra Budgetary Resources) ಮೂಲಭೂತ ಸೌಕರ್ಯಗಳಿಗಾಗಿ ಒಟ್ಟು ರೂ. 100.00 ಕೋಟಿಗಳ ಅವಕಾಶ ಕಲ್ಪಿಸಿದೆ.

ಬಜೆಟ್ ಆದ ಕೂಡಲೇ ನಿಮ್ಮ ಎಲ್ಲಾ ಸಮಸ್ಯೆಗಳು ಬಗೆಹರಿಯುತ್ತವೆ.

ಶ್ರೀ ಕರಡಿ ಸಂಗಣ್ಣ ಅಮರಪ್ಪ: ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಉತ್ತರ ಕೊಟ್ಟಿರತಕ್ಕಂಥದ್ದು ನಮಗೆಲ್ಲಾ ಸಂತೋಷವಾಗಿದೆ. 100 ಕೋಟಿ ರೂಪಾಯಿಗಳನ್ನು ಒದಗಿಸಲಾಗಿದೆ ಎಂದು ಹೇಳಿರುವುದರಿಂದ ಅವರಿಗೆ ಧನ್ಯವಾದಗಳನ್ನು ಹೇಳುವುದಕ್ಕೆ ಬಯಸುತ್ತೇನೆ.

ಗಮನ ಸೆಳೆಯುವ ಸೂಚನೆಗಳು

ವಿಷಯ: ರಾಜ್ಯದ ಹೇಮಾವತಿ ಯೋಜನೆ ಕೆಳಗಡೆ ಬರುವ ಶ್ರೀರಾಮದೇವರ ಉತ್ತರ–ದಕ್ಷಿಣ ನಾಲೆಗಳಿಗೆ ನೀರು ಹರಿಸದಿರುವ ಹಾಗೂ ನೀರಾವರಿ ಸಲಹಾ ಸಮಿತಿಯ ಸಭೆಯನ್ನು ಕರೆಯದೇ ಉದ್ಭವಿಸಿರುವ ಸಮಸ್ಯೆಯ ಬಗ್ಗೆ:–

ಶ್ರೀ ಹೆಚ್. ಡಿ. ರೇವಣ್ಣ: ಮಾನ್ಯ ಅಧ್ಯಕ್ಷರೇ, ರಾಜ್ಯದ ಹೇಮಾವತಿ ಯೋಜನೆ ಕೆಳಗಡೆ ಬರುವ ಶ್ರೀರಾಮದೇವರ ಉತ್ತರ–ದಕ್ಷಿಣ ನಾಲೆಗಳಿಗೆ ನೀರು ಹರಿಸದಿರುವ ಹಾಗೂ ನೀರಾವರಿ ಸಲಹಾ ಸಮಿತಿಯ ಸಭೆಯನ್ನು ಕರೆಯದೇ ಉದ್ಭವಿಸಿರುವ ಸಮಸ್ಯೆಯ ಬಗ್ಗೆ ಮಾನ್ಯ ಜಲ ಸಂಪನ್ಮೂಲ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಬಸವರಾಜ ಬೊಮ್ಮಾಯಿ: ಮಾನ್ಯ ಅಧ್ಯಕ್ಷರೇ,

(ಹೇಳಿಕೆಯ ಪ್ರತಿಯನ್ನು ಲಗತ್ತಿಸಲಾಗಿದೆ)

ವಿಧಾನ ಸಭೆಯ ನಿಯಮ 73ರ ನಿಯಮದ ಮೇರೆಗೆ ಶ್ರೀ ಹೆಚ್. ಡಿ. ರೇವಣ್ಣ, ವಿಧಾನ ಸಭಾ ಸದಸ್ಯರು, ಇವರ ಸೂಚನೆಗೆ ದಿನಾಂಕ 24–07–2008 ರಂದು ಜಲ ಸಂಪನ್ಮೂಲ ಸಚಿವರು ನೀಡುತ್ತಿರುವ ಹೇಳಿಕೆ.

***

ವಿಷಯ: ರಾಜ್ಯದ ಹೇಮಾವತಿ ಯೋಜನೆ ಕೆಳಗಡೆ ಬರುವ ಶ್ರೀರಾಮದೇವರ ಉತ್ತರ–ದಕ್ಷಿಣ ನಾಲೆಗಳಿಗೆ ನೀರು ಹರಿಸದಿರುವ ಹಾಗೂ ನೀರಾವರಿ ಸಲಹಾ ಸಮಿತಿಯ ಸಭೆಯನ್ನು ಕರೆಯದೇ ಉದ್ಭವಿಸಿರುವ ಸಮಸ್ಯೆಯ ಬಗ್ಗೆ:–

ಶ್ರೀರಾಮದೇವರ ಅಣೆಕಟ್ಟೆಯು ಹಾಸನ ಜಿಲ್ಲೆ ಹೊಳೆನರಸೀಪುರ ತಾಲ್ಲೂಕಿನಲ್ಲಿ ಬರುತ್ತಿದ್ದು, ಇದಕ್ಕೆ ಎರಡು ಕಾಲುವೆಗಳಿದ್ದು, ಉತ್ತರ ನಾಲೆ (108 ಕಿ.ಮೀ.) ಹಾಗೂ ದಕ್ಷಿಣ ನಾಲೆ (47 ಕಿ.ಮೀ.) ಉದ್ದವಿದ್ದು, ಇವುಗಳ ಅಚ್ಚುಕಟ್ಟು ಕ್ರಮವಾಗಿ 3830 ಹೆಕ್ಟೇರ್ ಹಾಗೂ 892 ಹೆಕ್ಟೇರ್‌ಗಳಾಗಿರುತ್ತದೆ. ಉತ್ತರ ನಾಲೆಯ ನೀರಿನ ಸಾಮರ್ಥ್ಯ ಮೊದಲ ಭಾಗದಲ್ಲಿ 490 ಕ್ಯೂಸೆಕ್ಸ್ ಇದ್ದು, ದಕ್ಷಿಣ ನಾಲೆಯ ನೀರಿನ ಸಾಮರ್ಥ್ಯ ಮೊದಲ ಭಾಗದಲ್ಲಿ 110 ಕ್ಯೂಸೆಕ್ಸ್ ಗಳಾಗಿರುತ್ತದೆ. ಈ ಅಣೆಕಟ್ಟು 1870 ರಲ್ಲಿ ನಿರ್ಮಾಣವಾದ ಅಣೆಕಟ್ಟೆಯಾಗಿದ್ದು, ಇದರ ನಾಲೆಗಳು ದುಸ್ಥಿತಿಯಲ್ಲಿ ಇರುವುದನ್ನು ಗಮನಿಸಿ, ಮುಖ್ಯ ಇಂಜಿನಿಯರ್, ಹೇಮಾವತಿ ಯೋಜನೆ, ಗೊರೂರು ಇವರು ಸರ್ಕಾರದ ಅನುಮೋದನೆ ಪಡೆದು ಟೆಂಡರ್ ಮುಖಾಂತರ ರೂ. 271.50 ಕೋಟಿಗಳಿಗೆ 13 ಪ್ಯಾಕೇಜ್ ಗಳಲ್ಲಿ ಆಧುನೀಕರಣ ಕಾಮಗಾರಿಗಳನ್ನು ತೆಗೆದುಕೊಂಡಿರುತ್ತಾರೆ. ಕಾಮಗಾರಿಗಳು ಬಹುತೇಕ ಪೂರ್ಣಗೊಂಡಿರುತ್ತದೆ. ಶ್ರೀರಾಮದೇವರ ಉತ್ತರ ಮತ್ತು ದಕ್ಷಿಣ ನಾಲೆಗಳು ಅಣೆಕಟ್ಟು ನಾಲೆಗಳಾಗಿದ್ದು, ಇದೇ ರೀತಿ ಹೇಮಾವತಿ ನದಿಗೆ ಅಡ್ಡಲಾಗಿ ಬರುವ ಹೇಮಗಿರಿ, ಅಕ್ಕಿಹೆಬ್ಬಾಳ ಹಾಗೂ ಮಂದಗೆರೆ ಎಡದಂಡೆ ಮತ್ತು ಬಲದಂಡೆ ಅಣೆಕಟ್ಟೆ ನಾಲೆಗಳಿದ್ದು, ಈ ಸಾಲಿನಲ್ಲಿ ನೀರಾವರಿ ಕಾಯ್ದೆಯನ್ವಯ ಇವುಗಳ ಮುಖಾಂತರ ನೀರನ್ನು ಬಿಡಲು ಕ್ರಮ ಕೈಗೊಳ್ಳಬೇಕಾಗಿರುತ್ತದೆ.

ಹೇಮಾವತಿ ಜಲಾಶಯದಲ್ಲಿ 37.103 ಟಿ.ಎಂ.ಸಿ. ಸಂಗ್ರಹಣಾ ಸಾಮರ್ಥ್ಯದ ಎದುರಾಗಿ ಈ ದಿನ ನೀರಿನ ಸಂಗ್ರಹಣೆ 18.43 ಟಿ.ಎಂ.ಸಿ. ಗಳಷ್ಟು ಇದ್ದು, ಒಳಹರಿವು ಸಹ ಕಡಿಮೆ ಇದ್ದು, 650 ಕ್ಯೂಸೆಕ್ಸ್‌ಗಳಿರುತ್ತದೆ. ಈ ಸಾಲಿನ ಮುಂಗಾರಿನಲ್ಲಿ ಗಣನೀಯ ಪ್ರಮಾಣದ

ಒಳಹರಿವು ಇರದ ಕಾರಣ ನೀರನ್ನು ಹರಿಸಲು ಕ್ರಮ ತೆಗೆದುಕೊಳ್ಳಲು ಸ್ವಲ್ಪ ತಡವಾಗಿದ್ದು, ಮಾನ್ಯ ಹಾಸನ ಜಿಲ್ಲಾ ಉಸ್ತುವಾರಿ ಸಚಿವರ ಒಪ್ಪಿಗೆಯ ಮೇರೆಗೆ ದಿನಾಂಕ 29-07-2008 ರಂದು ಬೆಂಗಳೂರಿನಲ್ಲಿ ಸಭೆ ಕರೆಯಲು ಕ್ರಮ ಕೈಗೊಂಡಿದ್ದು, ಸಭೆಯಲ್ಲಿ ಜಲಾಶಯದಲ್ಲಿ ಇರುವ ನೀರಿನ ಸಂಗ್ರಹಣೆ ಗಮನಿಸಿ ಸದಸ್ಯರ ಅಭಿಪ್ರಾಯ ಪಡೆದು ತೆಗೆದುಕೊಂಡು ನಿರ್ಣಯದಂತೆ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಹೆಚ್. ಡಿ. ರೇವಣ್ಣ: ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಸಚಿವರು ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಶ್ರೀರಾಮದೇವರ ಉತ್ತರ ಮತ್ತು ದಕ್ಷಿಣ ನಾಲೆಗಳಲ್ಲಿ 13 ಪ್ಯಾಕೇಜ್ ಮಾಡಿದ್ದೇವೆಂದು ಹೇಳಿದ್ದಾರೆ. ಈ 13 ಪ್ಯಾಕೇಜ್ ನಲ್ಲಿ ಎಷ್ಟು ಪ್ಯಾಕೇಜ್‌ನ ಕೆಲಸ ಮುಗಿದಿದೆ ಎಂಬುದು ಮತ್ತು ಬಾಕಿಯಿರತಕ್ಕಂಥ ಪ್ಯಾಕೇಜ್‌ನ ಕೆಲಸಗಳು ಏಕೆ ಮುಗಿದಿಲ್ಲ, ಇದಕ್ಕೆ ಕಾರಣವೇನು? ಇದಕ್ಕೆ ಗುತ್ತಿಗೆದಾರರ ಕಡೆಯಿಂದ ತಡವಾಗಿದೆಯೋ? ಅಥವಾ ಇಲಾಖೆ ಕಡೆಯಿಂದ ತಡವಾಗಿದೆಯೋ? ಇದರ ಉದ್ದೇಶ ಏನು ಮತ್ತೆ ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳಲಾಗಿದೆ ಎಂಬ ಉತ್ತರವನ್ನು ಮಾನ್ಯ ಸಚಿವರಿಂದ ನಾನು ಬಯಸುತ್ತೇನೆ. ಮತ್ತೆ ಇದಲ್ಲದೆ ಹೇಮಗಿರಿ, ಅಕ್ಕಿಹೆಬ್ಬಾಳ್ ಮತ್ತು ಮುಂದಗೆರೆ ನಾಲೆಗಳು ಮಹಾರಾಜರ ಕಾಲದ ಹಳೆಯ ನಾಲೆಗಳಾಗಿವೆ. ಇದಕ್ಕೆಲ್ಲಾ ಎಷ್ಟು ನೀರು ಬೇಕಾಗಬಹುದು? ಏಕೆಂದರೆ, ನಿಮ್ಮಲ್ಲಿ 18.43 ಟಿ.ಎಂ.ಸಿ. ನೀರು ಇದೆ. ಆದರೆ, ಈ ನಾಲೆಗಳಿಗೆ ಸುಮಾರು 1 ಅಥವಾ ಅರ್ಧ ಟಿ.ಎಂ.ಸಿ. ನೀರು ಬೇಕಾಗುತ್ತದೆಯೆಷ್ಟೆ;

ಶ್ರೀ ಹೆಚ್. ಡಿ. ರೇವಣ್ಣ (ಮು): ಆದರೆ ನೀರು ಬಿಟ್ಟಿದ್ದರೆ ಇಷ್ಟು ಹೊತ್ತಿಗೆ ಆ ಭಾಗದ ರೈತರು ಒಂದು ಬೆಳೆ ಬೆಳೆಯುವ ಸನ್ನಿವೇಶ ಇತ್ತು. ಇವತ್ತಿನ ಕಾಲ ಅಲ್ಲ ಇದು, ಇದು ಮಹಾರಾಜರ ಕಾಲದಿಂದ ಇದ್ದಂಥ ನಾಲೆ. ಏಕೆಂದರೆ, ನಿಮ್ಮ ಹೇಮಾವತಿ ಎಡದಂಡೆ ನಾಲೆ ಇರಬಹುದು, ಹೈಲೆವೆಲ್ ಇರಬಹುದು, ಅಥವಾ ಹೆಚ್‌ಆರ್‌ಬಿಸಿ ಇರಬಹುದು, ಈ ನಾಲೆಗಳ ಬಗ್ಗೆ ಬಿಟ್ಟುಬಿಡಿ, ನೀರು ಬಂದಿಲ್ಲ ಅಂಥ ಹೇಳುವುದು ಇದರ ಬಗ್ಗೆ ನಾನು ಒಪ್ಪಿಕೊಳ್ಳುತ್ತೇನೆ. ಈ ಹಳೆ ನಾಲೆಗಳಿಗೆ ನೀರು ಬಿಡದಿರುವುದಕ್ಕೆ ಕಾರಣವೇನು? ಇಷ್ಟು ಹೊತ್ತಿಗೆ ರೈತರಿಗೆ ನೀರು ಬಿಟ್ಟಿದ್ದರೆ? ನೀರಾವರಿ ಸಲಹಾ ಸಮಿತಿ meeting ಕರೆಯದೆ, ಈ ಸರ್ಕಾರ ಬಂದು 48 ದಿವಸ ಆಗಿದೆ. ಇಲ್ಲಿಯವರೆಗೆ ಸಭೆ ಕರೆದಿಲ್ಲ. ಮಾನ್ಯ ಬಸವರಾಜ ಬೊಮ್ಮಾಯಿ ಯವರ ಬಗ್ಗೆ ಅಭಿಮಾನ ಇದೆ. ಅವರು ಒಳ್ಳೆ ಉತ್ತಮವಾದಂಥ ನೀರಾವರಿ ಮಂತ್ರಿಗಳು, ಏಕೆಂದರೆ, ಅವರು ನಿನ್ನೆ ವಿಧಾನ ಪರಿಷತ್ತಿನಲ್ಲಿ 136 ಜನ

Engineers ಗಳ ಮೇಲೆ ಕ್ರಮ ತೆಗೆದುಕೊಂಡು ಒಂದು ದಿಟ್ಟ ನಿಲುವನ್ನು ತೆಗೆದುಕೊಂಡಿದ್ದಾರೆ. ಅದರಿಂದ ಅವರು ಇವತ್ತು ಈ 13 package ನಲ್ಲಿ ಯಾರು ಕಂಟ್ರಾಕ್ಟರ್ ಇದ್ದರು, ಯಾಕೆ ಮಾಡಿಲ್ಲ? ಅವರೇನ್ನಾನಾದರೂ black list ಗೆ ಸೇರಿಸುತ್ತೀರಾ ಅಥವಾ risk and cost ಹಾಕುತ್ತೀರಾ? ಏನು ಮಾಡುತ್ತೀರಾ ಅನ್ನುವುದನ್ನು ದಯಮಾಡಿ ತಿಳಿಸಬೇಕು ಎಂದು ನಾನು ಕೋರುತ್ತೇನೆ ಮತ್ತು ಈ ಹಳೆ ನಾಲೆಗಳು ಇದೆಯಲ್ಲ ಮಂದಗೆರೆ ಇರಬಹುದು, ಹೇಮಗಿರಿ ಇರಬಹುದು, ಅಕ್ಕಿಹೆಬ್ಬಾಳ್ ಇರಬಹುದು, ಶ್ರೀ ರಾಮದೇವರ ಉತ್ತರ ದಕ್ಷಿಣ ನಾಲೆಗಳಿಗೆ ಯಾವಾಗ ನೀರು ಬಿಡುತ್ತೀರಿ?

ಶ್ರೀ ಸಿ. ಎಸ್. ಪುಟ್ಟೇಗೌಡ: ಮಾನ್ಯ ಅಧ್ಯಕ್ಷರೆ, ಕೆ.ಆರ್. ಪೇಟೆಯ ಹಳೆಯ ನಾಲೆಗೆ ನೀರು ಕೊಟ್ಟಿಲ್ಲ. ದಯವಿಟ್ಟು ಕೂಡಲೇ ನೀರು ಬಿಡಬೇಕು. ಹೊಳೆನರಸೀಪುರ, ಚನ್ನರಾಯಪಟ್ಟಣ, ಕೆ.ಆರ್. ಪೇಟೆ ಆ ಭಾಗದ ಜನರಿಗೆ ಹಳೆಯ ನಾಲೆಯ ಮೂಲಕ ನೀರನ್ನು ಕೊಟ್ಟಿಲ್ಲ. ಅವರು ಬಹಳ ಕಂಗಾಲಾಗಿದ್ದಾರೆ. ಅದಕ್ಕೆ ಹೆಚ್ಚಿಗೆ ಅಂತಹ ನೀರು ಏನು ಬೇಕಾಗುವುದಿಲ್ಲ. ದಯಮಾಡಿ ಕೂಡಲೇ ನೀರು ಬಿಡಬೇಕು. ನೀರು ಇದೆ, ಇಲ್ಲವೆಂದು ಹೇಳುವುದಕ್ಕಾದರೂ ನೀವು ನೀರಾವರಿ ಸಲಹಾ ಸಮಿತಿಯ meeting ಅನ್ನು ಕರೆಯದಿದ್ದರೆ ಹೇಗೆ ಗೊತ್ತಾಗಬೇಕು. ದಯಮಾಡಿ ಎಲ್ಲಾ, ಶಾಸಕರನ್ನು ಕೂಡಲೇ ಸೇರಿಸಿ ತಡವಾದರೂ ಪರವಾಗಿಲ್ಲ, ಎರಡು ವರ್ಷವಾಗಿದೆ. ಆ ನಾಲೆಗೆ ಬೇಕಾಗಿರುವುದು ಕಡಿಮೆ ನೀರು, ದಯಮಾಡಿ ನೀರು ಹರಿಸಬೇಕೆಂದು ತಮ್ಮ ಮೂಲಕ ನಾನು ಪ್ರಾರ್ಥನೆಯನ್ನು ಮಾಡುತ್ತೇನೆ.

ಶ್ರೀ ಕೆ. ಬಿ. ಚಂದ್ರಶೇಖರ: ಮಾನ್ಯ ಅಧ್ಯಕ್ಷರೆ, ಕೇವಲ ಒಂದುವರೇ ಅಥವಾ ಎರಡು TMC ನೀರಾದರೆ ಸಾಕು. ದಯಮಾಡಿ ಕೂಡಲೇ ಸಲಹಾ ಸಮಿತಿಯನ್ನು ಕರೆದು ಅಲ್ಲಿ ಕೇವಲ 4-5 TMC ನೀರು ಎಂದು ಹೇಳುತ್ತಿದ್ದಾರೆ, ಆದರೆ ನಮಗೆ ಬೇಕಾಗಿರುವಂಥದ್ದು ಕೇವಲ ಒಂದೂವರೇ TMC ನೀರು, ಆ ಚಾನೆಲ್ 80 ವರ್ಷದ್ದು ಹಳೆಯದಾಗಿರುವುದರಿಂದ ಅದಕ್ಕೆ ಇಷ್ಟು ನೀರು ಕೊಡುವುದಕ್ಕೆ ಏನು ಅತಿಶಯವಾಗುವುದಿಲ್ಲ. ದಯಮಾಡಿ ಸಂಬಮಧಪಟ್ಟಂಥ ಮಂತ್ರಿಗಳು ಕೂಡಲೇ ಸಲಹಾ ಸಮಿತಿಯನ್ನು ಕರೆದು ಆ ರೈತರು ಈಗ ಆಗಿ ಹಾಕುವುದಕ್ಕೆ ಈಗಾಗಲೇ ಕಾಲಾವಕಾಶ ಮೀರಿ ಹೋಗಿದೆ. ಇನ್ನೊಂದು ವಾರದೊಳಗಡೆ ಸಲಹಾ ಸಮಿತಿಯನ್ನು ಕರೆದು ಆ ಅಣೆಕಟ್ಟಿನಿಂದ ನೀರನ್ನು ಬಿಡತಕ್ಕಂಥ

ಒಂದು ವ್ಯವಸ್ಥೆಯನ್ನು ಮಾಡಿಕೊಟ್ಟರೆ ಆ ಭಾಗದ ರೈತರಿಗೆ ಅನುಕೂಲವಾಗುತ್ತದೆ ಎನ್ನುತಕ್ಕಂಥ ಮಾತನ್ನು ತಮ್ಮ ಮುಂದೆ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಬಸವರಾಜ ಬೊಮ್ಮಾಯಿ: ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಹಿರಿಯ ಸದಸ್ಯರಾದ ಹೆಚ್.ಡಿ. ರೇವಣ್ಣನವರು ಮತ್ತು ಎಲ್ಲಾ ಸದಸ್ಯರ ಭಾವನೆಗಳನ್ನು ನಾನು ಅರ್ಥಮಾಡಿಕೊಂಡಿದ್ದೇನೆ. ಅವರಿಗೆ ವಸ್ತುಸ್ಥಿತಿ ಗೊತ್ತಿದೆ ಎಂದು ಭಾವಿಸುತ್ತೇನೆ. ಈ ವರ್ಷ ಒಳಹರಿವು ಬಹಳ ಕಡಿಮೆ ಇದೆ. ಕಳೆದ ಎರಡು ವರ್ಷಕ್ಕೆ ಹೋಲಿಸಿದಾಗ ಬಹಳಷ್ಟು ಒಳಹರಿವು ಕಡಿಮೆ ಇದೆ. ಇದೇ ಪರಿಸ್ಥಿತಿ ಹಿಂದೆ ಇದ್ದಾಗ 2002–03 ರಲ್ಲಿ 31 ಅಗಸ್ಟ್‌ಗೆ ನೀರು ಬಿಟ್ಟಿದ್ದಾರೆ, 3ನೇ ತಾರೀಖು ಆಗಸ್ಟ್ ತಿಂಗಳಲ್ಲಿ ನೀರನ್ನು ಬಿಟ್ಟಿದ್ದಾರೆ. ಒಟ್ಟಾರೆ ಅದರ ಪರಿಸ್ಥಿತಿ ತಮಗೆ ಅರ್ಥವಾಗಿದೆ ಎಂದು ನಾನು ಭಾವಿಸುತ್ತೇನೆ. 37 TMC ನೀರಿನ capacity ಯಲ್ಲಿ ಕೇವಲ 18 TMC ನೀರಿದೆ. ನಿಯಮದ ಪ್ರಕಾರ ನಾವು ಈಗಾಗಲೇ 14,15,16 ನೇ ತಾರೀಖಿಗೆ ನೀರನ್ನು ಬಿಡಬೇಕಾಗಿತ್ತು. ಒಳಹರಿವು ಕಡಿಮೆ ಇರುವುದರಿಂದ ಬಿಟ್ಟಿಲ್ಲ ಹೊರತಾಗಿ ICC meeting ನಡೆಯದಿರುವುದರಿಂದ ನೀರು ಬಿಡಬಾರದೆಂದು ಏನಿಲ್ಲ. ಈಗಾಗಲೇ ನಮ್ಮ ನೀರಾವರಿ Act ಪ್ರಕಾರ ಇಂತಹ ಸಂದರ್ಭದಲ್ಲಿ ನೀರಾವರಿ ಕಾಯಿದೆ ಸೆಕ್ಷನ್ 27, 31 ಮತ್ತು 32 ಪ್ರಕಾರ Superintendent Engineer ಸಂಬಂಧಪಟ್ಟಂತ local Legislators ಮತ್ತು Leaders ಗಳನ್ನು ಕರೆದು ಚರ್ಚೆ ಮಾಡಿ ನೀರನ್ನು ಬಿಡುವ ಅಧಿಕಾರವಿದೆ. ನಾವು ಅವರಿಗೆ 14ನೇ ತಾರೀಖು circular ನ್ನು ಕಳುಹಿಸಿರುತ್ತೇವೆ. ನೀವು ಕೂಡಲೇ ಚರ್ಚೆ ಮಾಡಿ ಎಂದು ಹೇಳಿರುತ್ತೇವೆ. ಒಳಹರಿವು ಕಡಿಮೆ ಇರುವುದಕ್ಕೆ ಅವರು ಮಾಡಿಲ್ಲ. ಈಗ ತಾವು ಏನು ಸಲಹೆಯನ್ನು ಕೊಟ್ಟಿದ್ದೀರಿ. ವಿಶೇಷವಾಗಿ ಆ 4 ನಾಲೆಗಳಿಗೆ ಏನು ಒಂದುವರೇ TMC ನೀರು ಬೇಕೆಂದು ಹೇಳಿರುತ್ತೀರಿ, ICC meeting ಇದೇ ತಿಂಗಳು 29ಕ್ಕೆ ಇದೆ, ಆ ಮೀಟಿಂಗಿಗೆ ತಮ್ಮನ್ನೆಲ್ಲಾ ಕರೆದು ಮಾಡುವಂಥದ್ದು ಒಂದು. ಈಗ ಕಡಿಮೆ ಪ್ರಮಾಣದಲ್ಲಿ ಏನು ನೀರು ಬಿಡುವಂಥದ್ದು ಇದೆ, ಅದನ್ನು ಕೂಡಲೇ ಪರಿಶೀಲನೆ ಮಾಡಿ ಆ ನೀರನ್ನು ಕೂಡಲೇ ಬಿಡುವುದಕ್ಕೆ ಸಂಬಂಧಪಟ್ಟಂಥ ಅಧಿಕಾರಿಗಳಿಗೆ ಸೂಚನೆಯನ್ನು ಕೊಡುತ್ತೇನೆ. ಈ ಸೆಕ್ಷನ್ ಪ್ರಕಾರ ಆ ಅಧಿಕಾರಿಗೆ ಅಧಿಕಾರ ಇದೆ, ಅದನ್ನು ಕೊಡಿಸುತ್ತೇನೆ.

ಶ್ರೀ ಹೆಚ್. ಡಿ. ರೇವಣ್ಣ: ಮಾನ್ಯ ಅಧ್ಯಕ್ಷರೇ, ಇದರಲ್ಲಿ ಏನಾಗುತ್ತದೆಂದರೆ, ಒಳಹರಿವು 650 ಇದೆ ಎಂದು ಹೇಳುತ್ತಾರೆ. ಅಲ್ಲಿ 18.43 TMC ನೀರು ಇದೆ. ಇಷ್ಟು ನೀರು

ಇರುವಾಗ ಈ ನಾಲೆಗಳಿಗೆ ಬೇಕಾಗಿರುವುದು 2 TMC ನೀರು. ಉತ್ತರ ನಾಲೆ, ದಕ್ಷಿಣ ನಾಲೆ ಎಲ್ಲಾ ಸೇರಿ 2 TMC ನೀರು. ಆದ್ದರಿಂದ ಕೂಡಲೇ ಅವರಿಗೆ ಡೈರೆಕ್ಷನ್ ಕೊಡಿ, ನಾಳೆ ಬೆಳಿಗ್ಗೆ ನೀರು ಬಿಡುವಂತೆ, ಏಕೆಂದರೆ ನಾಳೆ ದಿವಸ ಚೆನ್ನಾಗಿದೆ. Superintendent Engineer ಗೆ ನೀರು ಬಿಡುವ ಅಧಿಕಾರ ಇದೆ. ಇವತ್ತು ಸದನದಲಿರುವ ನನಗೆ ಮತ್ತು ಚಂದ್ರಶೇಖರವರಿಗೆ ಅದು ಬರುತ್ತದೆ. ಮಂದಗೆರೆ ಮತ್ತು ಹೇಮಗಿರಿ ಮತ್ತು ಈ ಕಡೆ ಮಾನ್ಯ ಪುಟ್ಟೇಗೌಡರಿಗೆ ಬರುತ್ತದೆ. ಅದಕ್ಕೆ ದಯಮಾಡಿ ಇವತ್ತೆ ಅವರಿಗೆ ಹೇಳಿ, ನಾಳೆ ಬೆಳಿಗ್ಗೆ ಗೇಟನ್ನು ಎತ್ತಿಸಿ, ಆ ಅಗಿ ಒಣಗಿ ಹೋದರೆ, ಮತ್ತೆ ಆ ಅಗಿಯನ್ನು ಹುಗಿದು ಮತ್ತೆ ಗೊಬ್ಬರವನ್ನು ತೆಗೆದುಕೊಳ್ಳಬೇಕಾದರೆ, 300 ರೂ.ಗಳ ಇರುವ ಗೊಬ್ಬರವನ್ನು 600 ರೂ.ಗಳನ್ನು ಕೊಟ್ಟು ಕೊಂಡುಕೊಳ್ಳುತ್ತಿದ್ದಾರೆ. ಅಂತಹ ಪರಿಸ್ಥಿತಿ ಇದ್ದಾಗ ಅವರಿಗೆ ತೊಂದರೆಯಾಗಬಾರದು. ಅದಕ್ಕಾಗಿ ನಾಳೆ ಬೆಳಿಗ್ಗೆ ನೀರು ಬಿಡುವಂತೆ ಹೇಳಿ, ನೀರಾವರಿಯ ಸಲಹಾ ಸಮಿತಿಯನ್ನು ಬೇಕಾದರೆ ಆ ಮೇಲೆ ಕರೆಯಿರಿ. ಹೇಮಾವತಿ ರೈಟ್ ಬ್ಯಾಂಕ್ ಮತ್ತು ಲೆಫ್ಟ್ ಬ್ಯಾಂಕ್ ನೀರಿನ ಬಗ್ಗೆ ತಾವು ಹೇಳುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಇದಕ್ಕೆ 2 TMC ನೀರು ಸಾಕು, ಹಿಂದಿನ ಮಹಾರಾಜರ ಕಾಲದಿಂದ ನೀರನ್ನು ಯಾರು ಕೆಳುತ್ತಿಲ್ಲ. ಹಳೆ ಶ್ರೀರಾಮದೇವರ ನಾಲೆ, ಉತ್ತರ ಮತ್ತು ದಕ್ಷಿಣ ನಾಲೆ, ಹೇಮಗಿರಿ ಮತ್ತು ಮಂದಗೆರೆ ನಾಲೆ ಬಿಡಬೇಕಾದರೆ ಯಾರನ್ನು ಕೇಳುತ್ತಿರಲಿಲ್ಲ. ಕರೆಕ್ಟಾಗಿ ಜೂನ್ ತಿಂಗಳಲ್ಲಿ ನೀರನ್ನು ಬಿಡುತ್ತಿದ್ದರು. ಜೂನ್ 31 ರೊಳಗೆ ನಾಟಿ ಮಾಡುತ್ತಿದ್ದರು. ಈಗ ಆ ಪರಿಸ್ಥಿತಿ ಹಾಳಾಗಿ, ಏಕೆಂದರೆ ಜುಲೈ ತಿಂಗಳ ಕೊನೆಯಾದರೂ ಇವತ್ತು ನಾಟಿ ಮಾಡುವುದಕ್ಕಾಗಿಲ್ಲ. ಎಲ್ಲರೂ ಆಗಿ ಹಾಕಿಕೊಂಡು ರೈತರು ಕಣ್ಣು ಬಿಡುತ್ತಾರೆ. ಈಗ ಎರಡು ವರ್ಷದಿಂದ ಬೆಲೆ ಇಲ್ಲ. ಅದಕ್ಕೆ ಪರಿಹಾರವನ್ನು ಕೊಡಿಸಬೇಕಾಗುತ್ತದೆ. ನ್ಯಾಯವಾಗಿ ನೋಡಿದರೆ ಯಾರೋ ಕಂಟ್ರಾಕ್ಟರ್ ಮಾಡಿದ ತಪ್ಪಿಗೆ ರೈತರ ಮನೆ ಹಾಳು ಮಾಡುವುದಕ್ಕೆ ಅಲ್ಲ. ಆ ಭಾಗದ ರೈತರು ಉತ್ತರ ಮತ್ತು ದಕ್ಷಿಣ ನಾಲೆಯಲ್ಲಿ ಯಾರಿದ್ದಾರೆ ಆ ರೈತರಿಗೆ ಬೆಳೆ ಪರಿಹಾರವನ್ನು ಕೊಡಿಸುವುದಕ್ಕೆ ನೀವು ಪ್ರಯತ್ನವನ್ನು ಮಾಡಬೇಕಾಗುತ್ತದೆ. ಅದು ಅಲ್ಲದೆ ಏನು 0 ದಿಂದ 20 ಕಿ.ಮೀ. ನಾಲೆ ಕೆಲಸವನ್ನು ಕಂಟ್ರಾಕ್ಟ್‌ರಿಗೆ ಕೊಟ್ಟರು, ಎರಡು ವರ್ಷವಾದರೂ ಇವತ್ತಿನವರೆಗೆ ಕೆಲಸವನ್ನು ಮಾಡಿಲ್ಲ. ಯಾವ ಉದ್ದೇಶ ಏನು ಕಾರಣ. ಅವನಿಗೆ ಏನಾದರೂ ಬಿಲ್ಲನ್ನು ಕೊಟ್ಟಿಲ್ಲವೇ? ಅಥವಾ ಏನು? ಅವನ ಮೇಲೆ risk and cost ಮಾಡಿ ಅವನ ಮೇಲೆ. ಏಕೆಂದರೆ ಕಂಟ್ರಾಕ್ಟ್‌ರಿಂದ ನಮಗೆ ಹೀಗೆ ಆಗಬೇಕು. ತಾವು ಶಿಸ್ತಿನಿಂದ ಇರುವ ವ್ಯಕ್ತಿಗಳು. ಕೂಡಲೇ ನೀರನ್ನು ಬಿಡುವುದಕ್ಕೆ ಹೇಳಬೇಕು, 0 ದಿಂದ 10

ಕಿ.ಮೀ. ಎರಡನೆಯದ್ದು, ಮೂರನೇಯದಾಗಿ ನಮ್ಮ ರೈತರಿಗೆ ಬೆಳೆ ಪರಿಹಾರವನ್ನು ಕೊಡಬೇಕು. ಎರಡು ವರ್ಷ ಬೆಳೆಯನ್ನು ಕಳೆದುಕೊಂಡಿದ್ದಾರೆ.

ಶ್ರೀ ಬಸವರಾಜ ಬೊಮ್ಮಾಯಿ: ಮಾನ್ಯ ಅಧ್ಯಕ್ಷರೆ, ನಾನು ಈಗಾಗಲೇ ಹೇಳಿದ್ದೇನೆ ನಮ್ಮ Superintendent Engineer ರವರಿಗೆ ಇರುವಂಥ ಅಧಿಕಾರ circular ನ್ನು ಈಗಾಗಲೇ ಕಳುಹಿಸಿದ್ದೇವೆ. ಅವರು ಕೇವಲ ಒಂದೂವರೆ TMC ನೀರು ಬೇಕು ಎಂದು ಹೇಳುತ್ತಿದ್ದಾರೆ, ಅದನ್ನು ಕೂಡಲೇ ಪರಿಶೀಲನೆ ಮಾಡಿ, ನಾನು ಉತ್ತರವನ್ನು ಪೂರ್ತಿ ಮಾಡುತ್ತೇನೆ.

ಅಧ್ಯಕ್ಷರು: ಮಾನ್ಯ ರೇವಣ್ಣನವರೆ, ಅವರು ಉತ್ತರವನ್ನು complete ಮಾಡಲಿ

ಶ್ರೀ ಬಸವರಾಜ ಬೊಮ್ಮಾಯಿ: ಒಂದು ನಿಮಿಷ, ನನ್ನ ಉತ್ತರ ಮುಗಿದ ಮೇಲೆ ನೀವು ಹೇಳಿ. ಅವರು ಶುಕ್ರವಾರ ಅಥವಾ ಶನಿವಾರ ಸಾಯಂಕಾಲ ಹೋಗುತ್ತಾರೋ Superintendent Engineer ರವರು ಸಂಬಂಧಪಟ್ಟಂತ Legislators ಜೊತೆಯಲ್ಲಿ ಮಾತನಾಡಿ ನೀರು ಬಿಡುವುದಕ್ಕೆ ವ್ಯವಸ್ಥೆ ಮಾಡಿಸುತ್ತೇನೆ, ICC ಗೆ ವೇಟ್ ಮಾಡುವುದಿಲ್ಲ.

ಶ್ರೀ ಹೆಚ್. ಡಿ. ರೇವಣ್ಣ: ಸರ್ ಮೂರು ಜನ Legislators ಇಲ್ಲಿಯೇ ಆ ಭಾಗದವರು ಇದ್ದೇವೆ. ನಾಳೆ ದಿವಸ ಚೆನ್ನಾಗಿದೆ ನೀರು ಬಿಡುವುದಕ್ಕೆ ಹೇಳಿಬಿಡಿ ಸರ್. ಇಲ್ಲಿಯೇ ಹೇಳಿ ಬಿಡುತ್ತೇವೆ, ಇನ್ನೊಂದು ದಿವಸ ಏಕೆ?

ಅಧ್ಯಕ್ಷರು: ರೇವಣ್ಣನವರಿಗೆ ಎಲ್ಲಾ ತಾಬಡತೋಬಡ ಆಗಬೇಕು

ಶ್ರೀ ಹೆಚ್. ಡಿ. ರೇವಣ್ಣ: ಇನ್ನು ಏನು ಹೇಳಬೇಕು.

ಶ್ರೀ ಮಲ್ಲಿಕಾರ್ಜುನ ಖರ್ಗೆ: ರೇವಣ್ಣನವರು ಇನ್ನೂ ಸರ್ಕಾರದಲ್ಲಿ ಇದ್ದೇನೆಂದು ತಿಳಿದುಕೊಂಡಿದ್ದಾರೆ, ಇವರು ಸರ್ಕಾರದಲ್ಲಿ ಇದ್ದು ನಾವು ಇಲ್ಲವೆಂದು ತಿಳಿದುಕೊಂಡಿದ್ದಾರೆ.

ಶ್ರೀ ಬಸವರಾಜ ಬೊಮ್ಮಾಯಿ: ಏನಿಲ್ಲ ಸಾರ್, ರೇವಣ್ಣನವರ ಸರ್ಕಾರ ಇದೆ ಎಂದು ತಿಳಿದುಕೊಂಡಿದ್ದು ಅರ್ಧಸತ್ಯ. ನಮ್ಮ ಸರ್ಕಾರ ಬಂದಿದೆ ಎಂದು ನಮಗೆ ಈಗಾಗಲೇ ಎಲ್ಲಾ ಗೊತ್ತಾಗಿದೆ. ನಿಮ್ಮಿಂದಲೂ ಸಾಕಷ್ಟು ಗೊತ್ತಾಗಿದೆ. ಆದ್ದರಿಂದ ಅವರು ಏನು ಹೇಳಿದ್ದಾರೆ ಅದರ ಬಗ್ಗೆ ಕೂಡಲೇ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಹೆಚ್. ಡಿ. ರೇವಣ್ಣ: ನಾಳೆ ಬೆಳಿಗ್ಗೆ ನೀರು ಬಿಡುವುದಕ್ಕೆ ಕ್ರಮ ತೆಗೆದುಕೊಳ್ಳಿ

ಸಾರ್. ಆಗಿ ಹಾಕಿ 20 ದಿವಸವಾಗಿದೆ. ಅಧಿಕಾರ ಇದೆ, ಎರಡು ವರ್ಷದಿಂದ ಅನ್ನವಿಲ್ಲದೆ ಸಾಯುತ್ತಿದ್ದಾರೆ.

ಶ್ರೀ ಬಸವರಾಜ ಬೊಮ್ಮಾಯಿ: ನೀವು ಹೇಳಿರುವುದನ್ನು ಅಧಿಕಾರಿಗಳಿಗೆ ಹೇಳಿ ಕೂಡಲೇ ಆದೇಶವನ್ನು ಕೊಡುತ್ತೇನೆ.

ಶ್ರೀ ಹೆಚ್. ಡಿ. ರೇವಣ್ಣ: ಪತ್ರಿಕೆ ಮೂಲಕ ಹೋಗಲಿ ಸರ್, ನಾಳೆ ಬೆಳಿಗ್ಗೆ ನೀರು ಬಿಡುತ್ತೇವೆಂದು ಹೇಳಿ.

ಶ್ರೀ ಬಸವರಾಜ ಬೊಮ್ಮಾಯಿ: ಪತ್ರಿಕೆಯ ಮುಖಾಂತರ ಅಲ್ಲ. ಅಲ್ಲಿ ರೈತರಿಗೆ ನೀರು ಕೊಡುವ ವಿಷಯವಿದೆ.

ಶ್ರೀ ಕೆ. ಬಿ. ಚಂದ್ರಶೇಖರ: ನೀವು ICC Meeting ನ್ನು 29ನೇ ತಾರೀಖಿಗೆ ಕರೆಯಿರಿ ಸಂತೋಷ.

(ಗೊಂದಲ)

ಅಧ್ಯಕ್ಷರು: ನೀವು ಕೊಡಿ, ಅವರು ಉತ್ತರವನ್ನಾದರೂ ಪೂರ್ಣ ಮಾಡಲಿ

ಶ್ರೀ ಬಸವರಾಜ ಬೊಮ್ಮಾಯಿ: ನಾನು ICC Meeting ಸಲುವಾಗಿ ಕಾಯುವುದಿಲ್ಲವೆಂದು ಹೇಳಿದ್ದೇನೆ. ನೀವು ಹೋದತಕ್ಷಣ ನಿಮ್ಮ ಸಲಹೆಯನ್ನು ತೆಗೆದುಕೊಂಡು ನೀರು ಬಿಡುಗಡೆ ಮಾಡುವುದಕ್ಕೆ ಆದೇಶವನ್ನು ಕೊಡುತ್ತೇನೆ.

ಶ್ರೀ ಹೆಚ್. ಡಿ. ರೇವಣ್ಣ: ಇನ್ನೊಂದು ವಿಷಯ ಹೇಳಲಿಲ್ಲ. 0 ದಿಂದ 10ನೇ ಕಿ.ಮೀ. ವರೆಗೆ ಒಂದು ರೂ.ಗಳ ಕೆಲಸವನ್ನು ಮಾಡಿಲ್ಲ. ಕಾರಣ ಏನು? ಅವರ ಮೇಲೆ risk and cost ಮಾಡುತ್ತಿರೋ ಅಥವಾ ಏನು ಮಾಡುತ್ತೀರಿ ಹೇಳಿ, ಅದು ನನಗೆ ಗೊತ್ತಿಲ್ಲ. ಏಕೆಂದರೆ, ಇಲಾಖೆಯ ಕಾನೂನು ರಿತ್ಯ ಕ್ರಮ ತೆಗೆದುಕೊಳ್ಳುತ್ತೀರೋ ಅಥವಾ ಕಂಟ್ರಾಕ್ಟರಿಗೆ risk and cost ಮಾಡುತ್ತೀರೋ ಅಥವಾ ಕಂಟ್ರಾಕ್ಟ್ ರಿಗೆ ಅನುಕೂಲ ಮಾಡುವುದಾದರೆ ನನ್ನ ಅಭ್ಯಂತರವೇನಿಲ್ಲ. ದಯಮಾಡಿ ಏನು ಮಾಡಬಹುದು ಎನ್ನುವುದನ್ನು ಹೇಳಿ.

ಶ್ರೀ ಬಸವರಾಜ ಬೊಮ್ಮಾಯಿ: ನೀವು ಹೇಳಿರುವ ಸಂಪೂರ್ಣವಾದ ಮಾಹಿತಿ ನನ್ನ ಹತ್ತಿರವಿಲ್ಲ. ಎಲ್ಲಾ ಮಾಹಿತಿಯನ್ನು ತರಿಸಿಕೊಳ್ಳುತ್ತೇನೆ. ನನಗೆ ಇರುವ ಮಾಹಿತಿ ಇಷ್ಟೆ, ಟೋಟಲ್ 271.5 ಕೋಟಿ ರೂ.ಗಳು ಅದಕ್ಕೆ sanction ಆಗಿತ್ತು. ಅದರಲ್ಲಿ 195 ಕೋಟಿ ರೂ.ಗಳಷ್ಟು ಬಹುತೇಕ ಕೆಲಸ ಪೂರ್ತಿಯಾಗಿದೆ. ಈಗಾಗಲೇ 190 ರಷ್ಟು

ಬಿಲ್ಲನ್ನು ಕೊಟ್ಟಾಗಿದೆ. ಬಾಕಿ ಬಿಲ್ಲನ್ನು ಅವರು ಏನು progress report ಯಾವ ತರಹ ಕೊಡುತ್ತಾರೆ ಅದರ ಅನುಗುಣವಾಗಿ ನಾವು ಕೊಡುತ್ತೇವೆ. ಅದು ಬೇರೆ ವಿಚಾರ. ಆದರೆ ಏತಕ್ಕಾಗಿ delay ಆಗಿದೆ, ಏನಾದರೂ ಕಾಮಗಾರಿ ಕಳಪೆಯಾಗಿದೆಯೇ ಎಂಬುದನ್ನು ಖಂಡಿತವಾಗಿಯೂ ಪರಿಶೀಲನೆ ಮಾಡುತ್ತೇವೆ.

ಶ್ರೀ ಹೆಚ್. ಡಿ. ರೇವಣ್ಣ: ನಾನು ಕಳಪೆ ವಿಷಯವನ್ನು ಮಾತನಾಡುತ್ತಿಲ್ಲ. ಕಂಟ್ರಾಕ್ಟರ್ ರವರಿಗೆ ಏಜೆನ್ಸಿಯನ್ನು ಫಿಕ್ಸ್ ಮಾಡಿದ್ದೀರಿ. ಆತನು ಸರಿಯಾಗಿ ಕೆಲಸವನ್ನು ಮಾಡಿಲ್ಲ. 0 ಯಿಂದ 10ನೇ ಕಿ.ಮಿ. ವರೆಗೆ ಕೆಲಸವನ್ನು ಮಾಡದೆ ಇರುವುದರಿಂದ ಅವರ ಮೇಲೆ ತಾವು ಏನು ಕ್ರಮವನ್ನು ತೆಗೆದುಕೊಳ್ಳುತ್ತೀರಿ? ಅವರು ಒಂದೂವರೆ ವರ್ಷವಾದರೂ ಕೆಲಸವನ್ನು ಮಾಡದೆ ಹೋದರೆ ನಮ್ಮ ರೈತರು . . . 0 ದಿಂದ 10ನೇ ಕಿ. ಮಿ. ವರೆಗೆ ಕೆಲಸವಾಗಿಲ್ಲ. ಅದನ್ನು ತಾವು ನಿಯಾಮವಳಿಗಳ ಪ್ರಕಾರವೇ ತೆಗೆದುಕೊಳ್ಳಿ ನನ್ನದೇನು ಅಭ್ಯಂತರವಿಲ್ಲ. ಕಾನೂನು ರೀತಿಯಾಗಿ ಏನು ಕ್ರಮವನ್ನು ತೆಗೆದುಕೊಳ್ಳಬೇಕೋ ಅದನ್ನು ಮಾಡಿ.

ಶ್ರೀ ಬಸವರಾಜ ಬೊಮ್ಮಾಯಿ: ಸನ್ಮಾನ್ಯ ಸದಸ್ಯರು ಏನು ಹೇಳಿದ್ದಾರೆ 0–10ನೇ ಕಿ.ಮಿ. ಏನು ಕಾಮಗಾರಿ ಕೆಲಸ ಮಾಡುವುದರಲ್ಲಿ ಡಿಲೇ ಮಾಡಿ ಆ ಕಾಮಗಾರಿ ಕೆಲಸವನ್ನು ಎತ್ತಿಕೊಂಡಿಲ್ಲವೆಂದು ಹೇಳಿದ್ದಾರೆ. ಅದನ್ನು ಪರಿಶೀಲನೆ ಮಾಡಿ ನಾನು ರೂಲ್ಸ್ ಪ್ರಕಾರ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಹೆಚ್. ಡಿ. ರೇವಣ್ಣ: ಪರಿಶೀಲನೆಯಲ್ಲ, ಕಾನೂನು ರೀತಿಯಾಗಿ ಕ್ರಮವನ್ನು ತೆಗೆದುಕೊಳ್ಳಬೇಕು.

ಶ್ರೀ ಬಸವರಾಜ ಬೊಮ್ಮಾಯಿ: ತಾವು ಹೇಳಿದ ಮೇಲೆ ನಾನು ಪರಿಶೀಲನೆಯನ್ನು ಮಾಡಬೇಕಲ್ಲವೇ?

ಅಧ್ಯಕ್ಷರು: ಮುಂದಿನದು ವಿತ್ತೀಯ ಕಾರ್ಯಕಲಾಪ. ಈಗ ನಾವು ಬಜೆಟ್ ಮೇಲೆ ಚರ್ಚೆಯನ್ನು ಮುಂದುವರೆಸೋಣ. ಮಾನ್ಯ ಸೋಮಣ್ಣನವರೇ ತಾವು ಪ್ರಾರಂಭ ಮಾಡಿ. ಮಾನ್ಯ ಸದಸ್ಯರು ವೇಳೆಯ ನಿಯಂತ್ರಣವನ್ನು ಹಾಕಿಕೊಂಡು ಮಾತನಾಡಿದರೆ ಒಳ್ಳೆಯದು, ಮಾತನಾಡುವವರ ಲಿಸ್ಟ್ ಬಹಳ ದೊಡ್ಡದು ಇದೆ. ಶಾಸಕರುಗಳು ಬಹಳ ಜನರು ಮಾತನಾಡುವವರು ಇದ್ದಾರೆ. ಎಲ್ಲರಿಗೂ ಮಾತನಾಡುವುದಕ್ಕೆ ಅವಕಾಶವನ್ನು ಕೊಡಬೇಕು. ನೀವೇ ನಿಯಂತ್ರಣವನ್ನು ಹಾಕಿಕೊಂಡು ಮಾತನಾಡಿದರೆ ಒಳ್ಳೆಯದು.